ಹೀಗೆಲ್ಲ ಏನೇ ಮಾಡಿದರೂ ಕಡೇವರೆಗೆ ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಉಳಿದಿದ್ದಾರೆ. ಇದೇ ಚಂಪಾ ವ್ಯಕ್ತಿತ್ವದ ವಿಶೇಷ.

ನನಗನ್ನಿಸುತ್ತೆ ನವ್ಯ ಸಾಹಿತ್ಯದ ಸಂದರ್ಭದಲ್ಲಿ ನೆಲೆಗೊಂಡ ವ್ಯಕ್ತಿ ವಿಶಿಷ್ಟತೆ ಮತ್ತು ದಲಿತ–ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಮುಖ್ಯವಾದ ಸಾಮಾಜಿಕ ಬದ್ಧತೆಗಳ ತಾಕಲಾಟ ಮತ್ತು ಅನುಸಂಧಾನಗಳು ಚಂಪಾ ಅವರ ಒಳತೋಟಿಯ ಭಾಗವಾಗಿದ್ದಿರಬೇಕು. ಈ ಒಳತೋಟಿಯಲ್ಲಿ ವ್ಯಕ್ತಿ ವಿಶಿಷ್ಟ ಗುಣಲಕ್ಷಣದ ಒತ್ತಾಸೆಯಿಂದ ಸಾಮಾಜಿಕ ಬದ್ಧತೆಯ ನಡುವೆಯೂ ವ್ಯಕ್ತಿನಿಷ್ಠ ವಿಭಿನ್ನ ನಿಲುವುಗಳನ್ನು ತೆಗೆದುಕೊಂಡಿದ್ದಾರೆ. ಸಂಘಟನೆಗಳಿಲ್ಲಿದ್ದೂ ಕೆಲವೊಮ್ಮೆ ಅವುಗಳನ್ನು ಮೀರಿ ವ್ಯಕ್ತಿ ವಿಶಿಷ್ಟ ಸ್ವಾತಂತ್ರ್ಯಕ್ಕೆ ಆದ್ಯತೆ ನೀಡಿದ್ದಾರೆ. ಆದರೆ, ಯಾವತ್ತೂ ಸಾಮಾಜಿಕ ಕಾಳಜಿಯನ್ನು ಉಳಿಸಿಕೊಂಡೇ ತಮ್ಮ ನಿಲುವುಗಳನ್ನು ರೂಪಿಸಿಕೊಂಡಿದ್ದಾರೆ. ಹೀಗಾಗಿ, ಚಂಪಾ ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯ, ದೃಷ್ಟಿ ಮತ್ತು ಸಮಷ್ಟಿಯ ಸಂಬಂಧಾಂತರಗಳ ಅಧ್ಯಯನಕ್ಕೆ ಆಕರವಾಗಿಯೂ ಮುಖ್ಯವಾಗುತ್ತದೆ. ಇಂಥದೊಂದು ಗಂಭೀರ ಪರಿಶೀಲನೆಯು ಚಂಪಾ ಅವರನ್ನು ಮೀರಿದ ಒಟ್ಟಾರೆ ತಾತ್ವಿಕ ಚಿಂತನೆಯೂ ಆಗಬಲ್ಲದು; ಆ ರೀತಿಯೇ ಆಗಬೇಕು.

ಆದರೆ, ಚಂಪಾ ಅವರ ವ್ಯಂಗ್ಯ, ವಿಡಂಬನೆಗಳೊಂದಾದ ವ್ಯಕ್ತಿತ್ವ ಮತ್ತು ಬರಹಗಳನ್ನು ಗಮನಿಸಿದಂತೆ ಅವರ ಉಳಿದ ಗಂಭೀರ ಹಾಗೂ ಚಿಂತನಾರ್ಹ ಆಯಾಮಗಳನ್ನು ಚರ್ಚಿಸದೇ

